**ಚಾಸಾಃ 11 ಪ್ರಾಸಾಃ 6**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ**

**ಸಿಸಿ ಸಂಖ್ಯೆ: 822/2017**

ಹೆಸರು : ಲತೀಫ್

ತಂದೆಯ ಹೆಸರು : ಹಮೀದ್

ಪ್ರಾಯ : 40 ವರ್ಷ

ಉದ್ಯೋಗ : ಕ್ಯಾಟರಿಂಗ್ ಏಜೆನ್ಸಿ

ವಾಸ : ಸವಣಾಲು ಗ್ರಾಮ, ಬೆಳ್ತಂಗಡಿ ತಾಲೂಕು

**ದಿನಾಂಕ 05.08.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ಸಾಕ್ಷಿಗೆ ನಿಪಿ2 ಮತ್ತು 3 ನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಗಳನ್ನು ನಿಪಿ-2(ಬಿ) ಮತ್ತು ನಿಪಿ3(ಬಿ) ಎಂದು ಗುರುತಿಸಲಾಯಿತು. ನಿಪಿ2 ಮತ್ತು 3 ಕ್ಕೆ 2017 ರಲ್ಲಿ ಎ.ಜೆ ಆಸ್ಪತ್ರೆಯಲ್ಲಿ ಸಹಿ ಮಾಡಿರುತ್ತೇನೆ. ಅಪಘಾತ ಪ್ರಕರಣದಲ್ಲಿ ಪೊಲೀಸರು ಬಂದಿದ್ದರು, ಆಗ ನಿಪಿ2 ಮತ್ತು 3 ಕ್ಕೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ10 ರವರು ಇದ್ದರು. ಅಲ್ಲದೆ ಚಾಸಾ1 ರವರು ಸಹ ಇದ್ದರು. 9 ಗಂಟೆಯಿಂದ 9.45 ಗಂಟೆಯವರೆಗೆ ಈ ದಾಖಲೆಯನ್ನು ಮಾಡಿಕೊಂಡಿರುತ್ತಾರೆ. ನಿಪಿ2 ಮತ್ತು 3 ರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ಅಪಘಾತದ ಹಿನ್ನೆಲೆಯಲ್ಲಿ ಪೊಲೀಸರು ರೇಷ್ಮೆರೋಡಿನ ಹತ್ತಿರ ಮಹಜರ್ ಮಾಡಲು ಬಂದಿದ್ದರು. ಆಗ ಪೊಲೀಸರಿಗೆ ಸ್ಥಳವನ್ನು ಚಾಸಾ1 ಮತ್ತು 10 ರವರು ತೋರಿಸಿಕೊಟ್ಟಿರುತ್ತಾರೆ. ಮಹಜರ್ ಮಾಡಿದ ನಂತರ ಪೊಲೀಸರು ಸ್ಥಳದಲ್ಲಿದ್ದ ಒಂದು ಕಾರು, ಎರಡು ಸ್ಕೂಟರ್ ವಾಹನಗಳನ್ನು ಸ್ವಾದೀನಪಡಿಸಿಕೊಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸ.ಸ.ಅ ರವರಿಂದಃ</u>**

ದಿಃ 10.6.2017 ರಲ್ಲಿ ರೇಷ್ಮೆರೋಡಿನ ಮುಂದೆ ರಣಗೋಳಿ ಎಂಬ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ.

<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ಎನ್.ಎಸ್.ಎ ವಕೀಲರಿಂದಃ</u>

ಚಾಸಾ1 ಮತ್ತು 10 ರವರು ಹೇಗೆ ಸ್ನೇಹಿತರು ಎಂದರೆ ಸಾಕ್ಷಿ ಚಾಸಾ1 ರವರು ನಮ್ಮ ಮಾಲಿಕರು, ಚಾಸಾ10 ರವರು ನಮ್ಮ ಚಾಲಕರು ಎಂದು ಹೇಳುತ್ತಾರೆ. ನಾನು ಕ್ಯಾಟರಿಂಗ್ ಕೆಲಸವನ್ನು ಮಂಗಳೂರಿನಲ್ಲಿ ಮಾಡುತ್ತೇನೆ. ನಮ್ಮ ಮನೆ ಸವಣಾಲಿನಲ್ಲಿ ಇರುತ್ತದೆ. ಚಾಸಾ10 ರವರ ಮನೆ ನೆರಿಯಾ ಗ್ರಾಮದಲ್ಲಿ ಇರುತ್ತದೆ. ಯಾವ ಮಾರ್ಗ ಎಂದರೆ ಸಾಕ್ಷಿ ಉಜಿರೆ ಕಕ್ಕಿಂಜೆ ಮಾರ್ಗ ನೆರಿಯಾ ಎಂಬಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ಅಪಘಾತವಾಗಿದೆ ಎಂದು ಯಾರು ಹೇಳಿದ್ದಾರೆ ಎಂದರೆ ಸಾಕ್ಷಿ ಗೋಪಾಲ ಗೌಡ ಹೇಳಿದ್ದಾರೆ ಎಂದು ಹೇಳುತ್ತಾರೆ. ಅವರು ಯಾರು ಎಂದರೆ ಸಾಕ್ಷಿ ಚಾಸಾ1 ರವರ ಮಾವ ಎಂದು ಹೇಳುತ್ತಾರೆ. ನೀವು ಘಟನಾ ಸಮಯದಲ್ಲಿ ಏನು ಕೆಲಸ ಮಾಡುತ್ತಿದ್ದಿರಿ ಎಂದರೆ ಸಾಕ್ಷಿ ಜೆ.ಸಿ.ಬಿ ಕೆಲಸ ಮಾಡುತ್ತಿದ್ದೆ ಎಂದು ಹೇಳುತ್ತಾರೆ. ಎಲ್ಲಿ ಯಾರ ಬಳಿ ಎಂದರೆ ಸಾಕ್ಷಿ ಚಾಸಾ1 ರವರ ಬಳಿ ಸವಣಾಲು ಎಂಬಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಹೇಳುತ್ತಾರೆ. ಚಾಸಾ1 ರವರ ಮನೆ ಎಲ್ಲಿ ಎಂದರೆ ಸಾಕ್ಷಿ ನಿಡ್ಡಾಜೆ ಗ್ರಾಮದಲ್ಲಿ ಎಂದು ಹೇಳುತ್ತಾರೆ. ತಕ್ಷೀರು ದಿನ ಚಾಸಾ1 ರವರು ನಿಮ್ಮ ಬಳಿ ಕೆಲಸ ಮಾಡುತ್ತಿದ್ದರಾ ಎಂದರೆ ಇಲ್ಲ. ಅವರು ಅವರ ಮನೆಯಲ್ಲಿ ನಿಡ್ಡಾಜೆ ಎಂಬಲ್ಲಿ ಇದ್ದರು. ಅವರಿಗೆ ಅಪಘಾತದ ಮಾಹಿತಿಯನ್ನು ಯಾರು ಹೇಳಿದ್ದಾರೆ ಎಂದರೆ ಗೊತ್ತಿಲ್ಲ. ಅಪಘಾತವಾಗಿದೆ ಎಂದು ಚಾಸಾ1 ರವರ ಮಾವ ನನಗೆ ತಿಳಿಸಿದ್ದು ಚಾಸಾ1 ಮತ್ತು ಅವರ ಮಾವ ಅವರ ಮನೆಯಿಂದ ತಕ್ಷೀರು ಸ್ಥಳಕ್ಕೆ ಬಂದಿರುತ್ತಾರೆ. ನಾನು ಸವಣಾಲಿನಿಂದ ತಕ್ಷೀರು ಸ್ಥಳಕ್ಕೆ ಹೋಗಿರುತ್ತೇನೆ. ಇಬ್ಬರ ಪೈಕಿ ಘಟನಾ ಸ್ಥಳಕ್ಕೆ ಯಾರು ಮೊದಲು ಬಂದಿದ್ದಾರೆ ಎಂದರೆ ಸಾಕ್ಷಿ ಚಾಸಾ1 ಮತ್ತು ಗೋಪಾಲ ಗೌಡ ಬಂದಿದ್ದಾರೆ, ಅದಾದ 5 ನಿಮಿಷದಲ್ಲಿ ನಾನು ಬಂದಿರುತ್ತೇನೆ. ನಾನು ಸಹ ತಕ್ಷೀರು ಸ್ಥಳಕ್ಕೆ ಬರುವಾಗ ದಾರಿ ಮಧ್ಯದಲ್ಲಿ ಒಂದು ಬಾರಿ ಗೋಪಾಲ ಗೌಡರಿಗೆ ಕರೆ ಮಾಡಿದ್ದೇನೆ.

ನಾನು ಕರೆ ಮಾಡಿದಾಗ ಗೋಪಾಲ ಗೌಡ ಮತ್ತು ಚಾಸಾ1 ರವರು ಸ್ಥಳ ತಲುಪಿದ್ದರು. ಚಾಸಾ1 ಮತ್ತು ಗೋಪಾಲ ಗೌಡರು ಪಿಕ್ ಅಪ್ ವಾಹನದಲ್ಲಿ ಸ್ಥಳಕ್ಕೆ ಬಂದಿರುತ್ತಾರೆ. ನಾನು ದ್ವಿಚಕ್ರ ವಾಹನದಲ್ಲಿ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಎರಡು ವರ್ಷಗಳ ಕಾಲ ಚಾಸಾ1 ರವರ ಜೊತೆ ಕೆಲಸ ಮಾಡಿದ್ದೇನೆ. ಅವರ ಯಾವೆಲ್ಲಾ ವಾಹನಗಳು ಇದ್ದವು ಎಂದರೆ ಸಾಕ್ಷಿ ಎರಡು ಟಿಪ್ಪರ್ ವಾಹನ, ಒಂದು ಜೆ.ಸಿ.ಬಿ, ಒಂದು ಕಾರು ಇತ್ತು, ಸ್ಕೂಟರ್ ಬೈಕು ಇರಲಿಲ್ಲ.

2. ಎ.ಜೆ ಆಸ್ಪತ್ರೆಯಲ್ಲಿ ಯಾವಾಗ ಪೊಲೀಸರಿಗೆ ಎಷ್ಟು ಸಹಿಗಳನ್ನು ಹಾಕಿಕೊಟ್ಟಿದ್ದೀರಿ ಎಂದರೆ ಸಾಕ್ಷಿ 2 ಸಹಿಗಳನ್ನು ಹಾಕಿಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಯಾವ ದಿನಾಂಕ ಗೊತ್ತಾ ಎಂದರೆ ಇಲ್ಲ. ಯಾವ ಸಂದರ್ಭದಲ್ಲಿ ಹಾಕಿದ್ದೀರಿ ಎಂದು ನೆನಪಿಸಿಕೊಂಡು ಹೇಳಬಹುದಾ ಎಂದರೆ ಇಲ್ಲ. ಘಟನೆ ನಂತರ ಯಾವತ್ತಾದರೂ ಪೊಲೀಸ್ ಠಾಣೆಗೆ ಹೋಗಿದ್ದೀರಾ ಎಂದರೆ ಇಲ್ಲ. ಆಸ್ಪತ್ರೆಗೆ ನಮ್ಮ ಸಹೋದ್ಯೋಗಿಯನ್ನು ನೋಡಲು 3 ದಿನಗಳ ಕಾಲ ಹೋಗಿರುತ್ತೇನೆ. ಯಾರನ್ನು ನೋಡಲು ಹೋಗಿದ್ದೀರಿ ಎಂದರೆ ಸಾಕ್ಷಿ ಹೆಸರು ಮರೆತಿದ್ದೇನೆ, ಆದರೆ ಸತ್ತಾಗ ಅವರ ಕಾರ್ಯಕ್ಕೆ ಹೋಗಿರುವುದಿಲ್ಲ. ಚಾಸಾ1 ಮತ್ತು 10 ರವರು ಸಹ ನನ್ನ ಜೊತೆ ಆಸ್ಪತ್ರೆಯಲ್ಲಿದ್ದರು, ಅವರು ಸಹ ಪೊಲೀಸರಿಗೆ ಸಹಿ ಕೊಟ್ಟಿರುತ್ತಾರೆ ಮತ್ತು ಹೇಳಿಕೆ ನೀಡಿರುತ್ತಾರೆ.
(2 ನೇ ಆರೋಪಿ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
(ಸಾ.ಓ.ಹೇ.ಕೇ.ಸ.ಇ.ಎ.ಒ) ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ